# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
# ಸ್ಪೆಷಲ್ ಎಸ್.ಸಿ./ಎಸ್.ಟಿ.20/2021

Pw-15

Cw- 36

| | |
|---|---|
| ಸಾಕ್ಷಿದಾರರ ಹೆಸರುಃ | ವಿನಾಯಕ ಎಸ್ ಮಳವಳ್ಳಿ |
| ತಂದೆಃಗಂಡನ ಹೆಸರುಃ | ಶೇಖಪ್ಪ |
| ವಯಸ್ಸುಃ | 36 ವರ್ಷ |
| ಉದ್ಯೋಗಃ | ಪಿಸಿ-1079 |
| ವಾಸ ಸ್ಥಳಃ | ರಾಣೇಬೆನ್ನೂರು |

**ದಿನಾಂಕ:21.11.2024 ರಂದು ಸಾಕ್ಷಿ ಹಾಜರಿದ್ದು , ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ನಾನು ಜುಲೈ 2016 ರಿಂದ ಏಪ್ರಿಲ್ 2022 ರವರೆಗೆ ಹಾವೇರಿ ಶಹರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ 17.03.2021 ರಂದು ಈ ಕೇಸಿನಲ್ಲಿ ತನಿಖಾಧಿಕಾರಿಗಳ ಆದೇಶದ ಮೇರೆಗೆ ಶವ ಪಂಚನಾಮೆ ಕಾಲಕ್ಕೆ ಘಟನೆ ನಡೆದ ಸ್ಥಳದಲ್ಲಿ ಹಾಗೂ ದಿನಾಂಕಃ18.03.2021 ರಂದು ಸ್ಥಳ ಪಂಚನಾಮೆ ಕಾಲಕ್ಕೆ ಸ್ಥಳದಲ್ಲಿ ಪೋಟೋ ತೆಗೆದು ಅದನ್ನು ವೀರೇಶ್ ಸ್ಟುಡಿಯೋದಲ್ಲಿ ಪ್ರಿಂಟ್ ಹಾಕಿ, ಸಿಡಿ ಮಾಡಿ ತನಿಖಾಧಿಕಾರಿಯವರಿಗೆ ಹಾಜರುಪಡಿಸಿ, ಈ ಬಗ್ಗೆ ದೃಢೀಕರಣ ಪತ್ರ ನೀಡಿರುತ್ತೇನೆ. ದೃಢೀಕರಣ ಪತ್ರವನ್ನು ನಿಪಿ-60, ಸಾಕ್ಷಿ ಸಹಿ ನಿಪಿ-60(ಎ) ಅಂತಾ ಗುರುತಿಸಲಾಯಿತು. ಸಿಡಿಯನ್ನು ನಿಪಿ-61 ಅಂತಾ ಗುರುತಿಸಲಾಯಿತು. ಈ ಬಗ್ಗೆ ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ**

ನಾನು ಪೋಟೋಗ್ರಫಿಯಲ್ಲಿ ತರಬೇತಿ ಪಡೆದಿದ್ದೇನೆ. ಡಿಜಿಟಲ್ ಕ್ಯಾಮೆರಾದಲ್ಲಿ ಪೋಟೋ ತೆಗೆದರೆ ದಿನಾಂಕ, ಸಮಯ ಬರುತ್ತದೆ ಎಂದರೆ ಸರಿ. ಕ್ಯಾಮೆರಾದಲ್ಲಿ ದಿನಾಂಕ, ಸಮಯ ಬರುವ ಆಪ್ಷನ್ ಇಲ್ಲ ಅಂತಾ ಹೇಳಿಕೆ ನೀಡಿಲ್ಲ. ವೀರೇಶ್ ಸ್ಟುಡಿಯೋದಲ್ಲಿ ಪ್ರಿಂಟ್ ಹಾಕಿಸಿದ ಬಗ್ಗೆ ದಾಖಲೆ ಹಾಜರುಮಾಡಿಲ್ಲ. ಪೋಟೋ ತೆಗೆಯುವಾಗ ಇದ್ದವರ ಹೆಸರು ಹೇಳಲಾಗುವುದಿಲ್ಲ. ಪಂಚನಾಮೆ ಕಾಲಕ್ಕೆ ಯಾವುದೇ ಪೊಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಗೆ ನನ್ನ ಸಹಿ ತೆಗೆದುಕೊಂಡಿಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.